**ಓ.ಎಸ್. ನಂಬರ್ಃ 74/2019** **ಡಿ ಡಬ್ಲೂಃ 3**

<u>ದಿಃ 23-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

**<u>ಪಾಟೀಸವಾಲು</u>** ಃ ವಾದಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ

ನನ್ನ ಊರು ಗಡಿಕೇಶ್ವರ್ ಎಂದರೆ ಸರಿ. ನಾನು ಕಳೆದ 30 ವರ್ಷಗಳಿಂದ ಸೇಡಂ ನಲ್ಲಿ ವಾಸಿಸುತ್ತಿದ್ದೇನೆ. ಸರಸ್ವತಿ ಇವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಅವರಿಗೆ ಕಣ್ಣು ಕಾಣಿಸುತ್ತಿರದೇ ಇರುವುದರಿಂದ ಅವಳಿಗೆ ಹಾಗೂ ನಂದಮ್ಮ ರವರಿಗೆ ಸೇರಿ ಶರಣಯ್ಯ ಇವರೊಂದಿಗೆ ಮದುವೆ ಮಾಡಿಕೊಟ್ಟಿದ್ದು ಎಂದರೆ ಸರಿ. ಸರಸ್ವತಿ ಇವಳಿಗೆಕಣ್ಣಿಗೆ ಕಾಣಿಸುತ್ತಿರುವುದರಿಂದ ಅವರ ತಂದೆಯು ಅವಳಿಗೆ ಮದುವೆಯಲ್ಲಿ ಜಮೀನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಸರ್ವೆ ನಂ. 28 ಅದರ ವಿಸ್ತೀರ್ಣ 3 ಎಕರೆ 29 ಗುಂಟೆ ಹಾಗೂ ಮತೊಂದು ಜಮೀನು ಸರ್ವೆ ನಂ.23 ಅದರ ವಿಸ್ತೀರ್ಣ 2 ಎಕರೆ 13 ಗುಂಟೆ ಇರುತ್ತದೆ. ಸಾಕ್ಷಿಗೆ ನಿ ಪಿ 2 ರಂತೆ ಸರ್ವೆ ನಂ. 28 ರಲ್ಲಿ 2 ಎಕರೆ 22 ಗುಂಟೆ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯವರು ವಾದಿಯವರಿಗೆ ಗೊತ್ತಿಲ್ಲದೇ ಸರ್ವೆನಂ. 28 ರಲ್ಲಿ 3 ಎಕರೆ 29 ಗುಂಟೆ ಮ್ಯುಟೇಷನ್ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸರಸ್ವತಿ ಇವಳಿಗೆ ಬಾಟನಿಯಲ್ಲಿ ಹೊಲ ಕೊಡುವಾಗ ನಾನು ಇರಲಿಲ್ಲ. ನನಗೆ ಬಾಟನಿಯಲ್ಲಿ ಸರಸ್ವತಿ ಇವಳಿಗೆ ಎಷ್ಟು ಹೊಲ ಕೊಟ್ಟಿದ್ದಾರೆ ಎಂಬುದರೆ ಬಗ್ಗೆ ಗೊತ್ತಿಲ್ಲ ಹಾಗೂ ನಾನು ಸುಳ್ಳು ಪ್ರಮಾಣ ಪತ್ರವನ್ನು ಬರೆಸಿದ್ದೇನೆ ಎಂದರೆ ಸರಿಯಿಲ್ಲ. ಸರಸ್ವತಿಯರಿಗೆ ಮಕ್ಕಳು ಇಲ್ಲ ಎಂದರೆ ಸರಿ. 2 ನೇ ಪ್ರತಿವಾದಿರವರು ಸರಸ್ವತಿರವರ ಅಕ್ಕನಾ ನಂದಮ್ಮ ರವರ ಮಗೆ ಎಂದರೆ ಸರಿ. ಸದರಿ ಸರಸ್ವತಿ ಇವಳು ಮೃತ ಪಟ್ಟಿರುವುದರಿಂದ ಪ್ರತಿವಾದಿಯವರಿಗೆ ಹಾಗೂ ದಾವಾ ಸ್ವತ್ತಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ದಾವಾ ಸ್ವತ್ತು ಸರಸ್ವತಿ ರವರ ತಂದೆಯ ಕಡೆಯಿಂದ ಬಂದಿರುವ ಆಸ್ತಿ ಆಗಿರುವುದರಿಂದ ಸದರಿ ಆಸ್ತಿ ವಾದಿಯವರಿಗೆ ಹೊಗಬೇಕಾಗುತ್ತದೆ ಎಂದರೆ ಸಾಕ್ಷಿಯು ಸರಸ್ವತಿ ಇವಳಿಗೆ ಮಕ್ಕಳು ಇರದೇ ಇರುವುದರಿಂದ 2 ನೇ ಪ್ರತಿವಾದಿಯವರಿಗೆ ಬರೆದುಕೊಂಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮೃತ ಸರಸ್ವತಿ ಇವಳು ಸನ್ 09-02-2018 ರಂದು ಬರೆದುಕೊಟ್ಟಿರುತ್ತಾರೆ. ದಿ.08-02-2018 ರಂದು ಮೃತ್ಯು ಪತ್ರವನ್ನು ಬರೆಯುವುದು ಪ್ರಕ್ರಿಯೇ ಮುಗಿದಿದ್ದು ನಾನು ಸಹ ಉಪಸ್ಥಿತ ಇದ್ದೆ ಎಂದರೆ ಸರಿ. ನಿ ಡಿ 1ರಲ್ಲಿ ನನ್ನ ಹೆಸರು ಬೆರಳಚ್ಚು ಮಾಡಿಲ್ಲ ಆದರೆ ಕೈ ಬರಹದಿಂದ ಬರೆಯಲಾಗಿದೆ ಎಂದರೆ ಸರಿ. 08 ನೇ

ತಾರೀಖಿನಂದು ನಾನು ಮೃತ್ಯು ಪತ್ರ ತಯಾರು ಮಾಡುವಾಗ ಹಾಜರಿರಲಿಲ್ಲ ಆದ್ದರಿಂದ ಅದರಲ್ಲಿ ಏನು ಬರೆಯಲಾಗಿ ಎಂಬುದರ ಕುರಿತು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಆ ದಿನ ಸಮಯ ಮುಗಿದಿರುವುದರಿಂದ ನಾಳೆ ಬಾ ಅಂತಾ ಹೇಳಿದಕ್ಕೆ ಮರುದಿನ 9 ನೇ ತಾರೀಖಿನಂದು ಬಂದು ಮಾಡಿದ್ದು ಇರುತ್ತದೆ. ದಿ.08-02-2018 ರಂದು ನಿ ಡಿ1 ದಾನ ಪತ್ರದಲ್ಲಿ ಏನ ಬರೆದಿರುತ್ತಾರೆ ನಾನು ನೋಡಿಲ್ಲ. ನಿ ಡಿ 1 ಮೃತ್ಯು ಪತ್ರದಲ್ಲಿ ನನ್ನ ಹೆಸರು ಟೈಪ್ ಏಕೆ ಮಾಡಿಲ್ಲ ಹಾಗೂ ಕೈಬರಹದಿಂದ ಏಕೆ ಬರೆದಿರ ಅಂತಾ ಕೇಳಿಲ್ಲ. ಸರಸ್ವತಿ ಇವಳಿಗೆ ಕಣ್ಣು ಕಾಣದೇ ಇರುವುದರಿಂದ 2ನೇ ಪ್ರತಿವಾದಿಯವರು ವಾದಿಯವರಿಗೆ ಮ್ಯುಟೇಷನ್ ಮಾಡಿಕೊಡುತ್ತೇನೆ ಅಂತಾ ಮೊಸ ಮಾಡಿ ಸುಳ್ಳು ಮೃತ್ಯು ಪತ್ರವನ್ನು ಮಾಡಿದ್ದು ಎಂದರೆ ಸರಿಯಿಲ್ಲ.

ನಾನು ಮತ್ತು 2 ನೇ ಪ್ರತಿವಾದಿಯವರು ಸೇರಿ ಸುಳ್ಳು ಮೃತ್ಯು ಪತ್ರವನ್ನುಸೃಷ್ಟಿ ಮಾಡಿದ್ದೇನೆ ಎಂರದೆ ಸರಿಯಿಲ್ಲ. ನಿ ಡಿ 1 ರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ 2 ನೇ ಪ್ರತಿವಾದಿಯವರ ಕೋರಿಕೆಯ ಮೇರೆಗೆ ಸಹಿ ಹಾಕಿರತ್ತೇನೆ ಎಂರದೆ ಸಾಕ್ಷಿಯು ನಮಗೆ ಎಲ್ಲಾ ಓದಿ ಹೇಳಿದ ನಂತರವೇ ಸಹಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಸರಿಸ್ವತಿಯವಳಿಗೆ ಕಣ್ಣು ಕಾಣದೇ ಇರುವುದರಿಂದ ಆಮೇಲೆ ವಿಚಾರ ಮಾಡಿ ಕೈಯಿಂದ ಬರೆದಿರುತ್ತಾರೆ ಎಂದರೆ ಸರಿಯಿಲ್ಲ. ನಾನು 30 ವರ್ಷ ಸೇಡಂ ನಲ್ಲಿ ಇರುವುದರಿಂದ ಸರಸ್ವತಿ ಇವಳು 2 ನೇ ಪ್ರತಿವಾದಿಯವರಿಗೆ ಮೃತ್ಯು ಪತ್ರ ಮಾಡಿರುವ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯವರು ಹಾಗೂ ನಾನು ಒಂದೇ ಗ್ರಾಮದವರು ಇರುವುದರಿಂದ ಸುಳ್ಳು ಸಹಿ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**